# ಕಾಮ್ರೇಡ್ ಆಲಿ ರೈಟರ ಕೆಂಪು ಕಾರಿಡಾರು



ಚಳಿಗಾಲದ ಮಡಿಕೇರಿಯ ಚುಮುಚುಮು ಬಿಸಿಲು ಯಾವಾಗಲೂ ಮನೋಹರವಾಗಿರುವುದು. ಬೆಚ್ಚಗಿನ ಉಡುಪುಗಳಿಂದ ಮೈಯಿಡೀ ಮುಚ್ಚಿಕೊಂಡು, ಚುರುಗುಡುವ ಬಿಸಿಲ ಕಿರಣಗಳಿಗೆ ಅಂಗೈಯನ್ನು ಮಾತ್ರ ಒಡ್ಡಿ ಹಸ್ತಗಳನ್ನು ಹೊಸೆದು ಬಿಸಿಮಾಡಿಕೊಳ್ಳುತ್ತಾ ಕಚೇರಿಯೊಳಗೆ ಕಾಲಿಡುವುದೂ ಚೇತೋಹಾರಿಯೇ. ಕಚೇರಿಗೆ ಕಾಲಿಡುವ ಮುನ್ನ ಸಣ್ಣಗಿನ ಚಳಿಗಾಳಿಗೆ ಸಣ್ಣಗೆ ತುಯ್ದಾಡುತ್ತಾ ತಲೆದೂಗುತ್ತಿರುವ ಹಲವು ಕುಂಡಗಳಲ್ಲಿ ಬೆಳೆದಿರುವ ಅಸಂಖ್ಯ ಕುಸುಮಗಳ ಬೆಳಗಿನ ಉಲ್ಲಾಸವನ್ನು ನನ್ನದೇ ಆಹ್ಲಾದ ಎಂಬಂತೆ ಅನುಭವಿಸುತ್ತಾ ಒಂದಿಷ್ಟು ಹೊತ್ತು ಕಳೆದು ಒಳಹೊಕ್ಕರೆ, ಇನ್ನೂ ಕೋಣೆಯ ಒಳಗೇ ಉಳಿದಿರುವ ತಣ್ಣಗಿನ ಗಾಳಿ ಬಾಗಿಲು ತೆರೆದೊಡನೆ ಹೊರಬಂದು ನಸುನಕ್ಕು ಸ್ವಾಗತಿಸಿದಂತೆ ಭಾಸವಾಗುವುದು. ಕೋಣೆಯ ಕಿಟಕಿಯ ಬಾಗಿಲುಗಳನ್ನು ವಿಶಾಲವಾಗಿ ತೆರೆದು, ಇನ್ನಷ್ಟು ಶೀತಲಗಾಳಿಯನ್ನು ಒಳಬಿಟ್ಟು, ರೂಮಿನ ಹೀಟರನ್ನು ಹೊತ್ತಿಸಿ ಶೂ ಬಿಚ್ಚಿ ತಣ್ಣಗಿರುವ ಪಾದಗಳನ್ನು ಬೆಂಕಿಕಾಯಲು ಬಿಟ್ಟು ಒಂದು ದೊಡ್ಡ ಉಸಿರು ಬಿಟ್ಟರೆ ಬಾಯಿಂದ ಪುಟ್ಟ ಹಬೆಯ ಮೋಡವೊಂದು ಆ ತಣ್ಣಗಿನ ಗಾಳಿಯ ಒಳಹೊಕ್ಕು ಮಾಯವಾಗಿಬಿಡುವುದು.

ಆವತ್ತು ಶುಕ್ರವಾರ. ಮಡಿಕೇರಿಯ ವಾರದ ಸಂತೆಯ ದಿನ.

ತಾವು ಬೆಳೆದ ನಾಡತರಕಾರಿಗಳನ್ನೂ, ಕಣಿಲೆ, ಅಣಬೆಗಳನ್ನೂ, ಕಿತ್ತಳೆ, ನಾಟಿಮೊಟ್ಟೆ, ಗೆಣಸು, ಅಲಸಂದೆ, ಕೈಹುಳಿ, ಕಾಚಿಪುಳಿ, ಕಾಡು ಮಾವಿನ